**ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

ಸ್ಪೆಷಲ್ ಕೇಸ್ ನಂಃ 54/2022 ಪಿ.ಡಬ್ಲ್ಯೂಃ 6

ಸಿ.ಡಬ್ಲ್ಯೂಃ 5

| | |
|---|---|
| ಸಾಕ್ಷಿದಾರರ ಹೆಸರು | ಮಾನಪ್ಪ |
| ತಂದೆಯ ಹೆಸರು | ಬಸಪ್ಪ |
| ವಯಸ್ಸು | 50 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಿಳಾಸ | ನಿಂಬಲಗುಂದಿ , ಹುನಗುಂದ ತಾಲೂಕು |

ದಿನಾಂಕಃ 13-10-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1) ನಾನು 2-3 ವರ್ಷಗಳ ಹಿಂದೆ ಕಾಪುವಿಗೆ ಕೂಲಿ ಕೆಲಸ ಹುಡುಕಿಕೊಂಡು ಬಂದಿದ್ದೆ. ಆಗ ನಾನು ಕಾಪುವಿನ ಕಲ್ಯಾ ಎಂಬಲ್ಲಿ ರೂಮ್ ಮಾಡಿಕೊಂಡು ವಾಸವಾಗಿದ್ದೆ. ಚಾಸಾ-1 ನನಗೆ ಕೂಲಿ ಕೆಲಸಕ್ಕೆ ಕರೆದಿದ್ದರಿಂದ ಪರಿಚಯ. 2 -3 ವರ್ಷಗಳ ಹಿಂದೆ ಚಾಸಾ-1 ಇವರು ನನಗೆ ಕೂಲಿ ಕೆಲಸಕ್ಕೆ ಫೋನ್ ಮಾಡಿ ಕರೆಸಿದ್ದರು. ಅದಕ್ಕಾಗಿ ನಾನು ಉಚ್ಚಿಲದಲ್ಲಿ ಕಸ ಲೋಡ್ ಮಾಡುವ ಜಾಗೆಗೆ ಹೋಗಿದ್ದೆ. ಅಲ್ಲಿ ನನ್ನನ್ನು ಸೇರಿ 3 ಜನ ಕೆಲಸಗಾರರು ಇದ್ದರು. ಅಲ್ಲಿ ಚಾಸಾ-1 ಸಹ ಇದ್ದರು. ಮೂಟೆಯಲ್ಲಿ ಇದ್ದ ಕಸವನ್ನು ಟೇಂಪೋಕ್ಕೆ ಲೋಡ್ ಮಾಡಲು ಹೇಳಿದ್ದರು, ಅದರಂತೆ ಲೋಡ್ ಮಾಡಿದ್ದೆವು. ನಂತರ ಟೆಂಪೋದೊಂದಿಗೆ ಹೋಗಿದ್ದೆವು. ಆಗ ಚಾಸಾ-1 ಯಾವುದರಲ್ಲಿ ಬಂದಿದ್ದರು ಗೊತ್ತಿಲ್ಲ.

2) ನಂತರ ಟೆಂಪೋ ಲೋಡ್ ಮಾಡಿದ ಜಾಗೆಯಿಂದ 3 -4 ಕಿ.ಮಿ ದೂರ ಒಂದು ಜಾಗಕ್ಕೆ ಹೋಗಿತ್ತು. ಅದು ಯಾವ ಜಾಗೆ ಎಂದು ಗೊತ್ತಿಲ್ಲ. ಅಲ್ಲಿ ಸುಮಾರು 10 ಮೂಟೆಗಳನ್ನು ಅನ್ ಲೋಡ್ ಮಾಡಿದ್ದೆವು. ಆಗ ಅಲ್ಲಿ ಚಾಸಾ-1 ಬಂದಿದ್ದನ್ನು ನಾನು ಗಮನಿಸಿಲ್ಲ. ಅಲ್ಲಿ 4 – 5 ಜನ ಕಸ ಹಾಕಬಾರದೆಂದು ಹೇಳಿದ್ದರು, ಅದಕ್ಕಾಗಿ

ನಾವು ಆ ಮೂಟೆಗಳನ್ನು ಪುನಃ ಲೋಡ್ ಮಾಡಿದ್ದೆವು. ಅವುಗಳನ್ನು ಪುನಃ ಲೋಡ್ ಮಾಡಿದ ಘಟಕಕ್ಕೆ ತಂದು ಇಳಿಸಿದ್ದೆವು. ಆದಿನ ಕಸ ಹಾಕುವಾಗ ತಡೆ ಮಾಡಿದ ಜನ ಯಾರು ಎಂದು ಗುರುತಿಸಲು ಆಗುವುದಿಲ್ಲ. ಈದಿನ ನ್ಯಾಯಾಲಯದ ಮುಂದೆ ಇರುವ ವ್ಯಕ್ತಿಯನ್ನು ಆದಿನ ನೋಡಿದ್ದ ಪರಿಚಯ ಇಲ್ಲ. ಆದಿನ ನ್ಯಾಯಾಲಯದ ಮುಂದೆ ಇರುವ ವ್ಯಕ್ತಿ ಚಾಸಾ-1 ಇವರೊಂದಿಗೆ ಗಲಾಟೆ ಮಾಡಿ, ಪೋನ್ ಒಡೆದು ಹಾಕಿದ್ದು ನಾನು ನೋಡಿಲ್ಲ. ಆದಿನ ಚಾಸಾ-1, ಏಟಾಗಿ, ಉಪಚಾರ ಪಡೆದ ಬಗ್ಗೆ ಮತ್ತು ಆರೋಪಿಯ ಮೇಲೆ ದೂರು ಕೊಟ್ಟಿದ್ದ ಬಗ್ಗೆ ನನಗೆ ಮಾಹಿತಿ ಇಲ್ಲ. ಪೊಲೀಸರು ನನ್ನನ್ನು ವಿಚಾರಿಸಿಲ್ಲ. ನನ್ನ ಸಹಿ ಪಡೆದಿದ್ದರು.

**( ಈ ಹಂತದಲ್ಲಿ ಸರಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲು ಮಾಡಲು ಸರಕಾರಿ ಅಭಿಯೋಜಕರಿಗೆ ಅನುಮತಿ ಕೊಡಲಾಯಿತು)**

**<u>ಪಾಟಿಸವಾಲು: ಸರಕಾರಿ ಅಭಿಯೋಜಕರಿಂದ:</u>**

1) ದಿನಾಂಕ 25-02-2022 ರಂದು ಚಾಸಾ-1 ನನ್ನನ್ನು ಕೆಲಸಕ್ಕೆ ಕರೆದಾಗ ಅಲ್ಲಿ ಚಾಸಾ-1 ಇವರೊಂದಿಗೆ, ಚಾಸಾ-2 ರವರು ಸಹ ಇದ್ದರು ಎಂದರೆ ನನಗೆ ಪರಿಚಯ ಇಲ್ಲ. ಆದಿನ ಚಾಸಾ-1, ತರಿಸಿದ್ದ ಟಂಪೋ, ಚಾಸಾ -9 ಇವರಿಗೆ ಸೇರಿದ್ದು ಎಂದರೆ ನನಗೆ ಪರಿಚಯ ಇಲ್ಲ. ಆದಿನ ನಾವು ಹೋಗುತ್ತಿದ್ದ ಟೆಂಪೋದ ಮುಂದೆ ಕಾರಿನಲ್ಲಿ ಚಾಸಾ-1 ಮತ್ತು 2 ಹೋಗುತ್ತಿದ್ದರು ಎಂದರೆ ನಾನು ನೋಡಿಲ್ಲ. ಆದಿನ ಚಾಸಾ-1, ಪ್ಲೊಟ್ಯದಲ್ಲಿ ಒಂದು ಜಾಗೆಯ ಬಳಿ ಚಾಸಾ-1 ನಿಲ್ಲಿಸಲು ಹೇಳಿದ್ದರಿಂದ ಟೆಂಪೋ ನಿಲ್ಲಿಸಿದ್ದೆವು ಎಂದರೆ ನಿಜ. ಆದಿನ ಅನ್ ಲೋಡ್ ಮಾಡಬೇಕಾಗಿದ್ದ ಜಾಗೆಯಲ್ಲಿ, ವಾಹನ ಹೋಗಲು ಆಗದೇ ಇದ್ದುದರಿಂದ, ಅಲ್ಲಿಯೇ ಟೆಂಪೋ ನಿಲ್ಲಿಸಿ, 10 ಮೂಟೆಗಳನ್ನು ಇಳಿಸಿದ್ದೆವು ಎಂದರೆ ನಿಜ.

2) ಆಗ ನ್ಯಾಯಾಲಯದಲ್ಲಿರುವ ಆರೋಪಿ ಸ್ಕೂಟಿಯಲ್ಲಿ ಅಲ್ಲಿಗೆ ಬಂದಿದ್ದರು ಎಂದರೆ, ನಾನು ನೋಡಿಲ್ಲ. ಅಲ್ಲಿಗೆ ಬಂದಿದ್ದ ಆರೋಪಿ, ನಮಗೆ '' ಯಾರ ಅಪ್ಪನಾ ಜಾಗ ಎಂದು ಇಲ್ಲಿ ಕಸ ಹಾಕುತ್ತಿದ್ದೀರಿ'' ಎಂದು ಹೇಳಿದ್ದರು ಎಂದರೆ, ಕೇಳಿದ್ದರು, ಅವರು ಯಾರು ಎಂದು ನಾನು ನೋಡಿಲ್ಲ. ಆಗ ಚಾಸಾ-1 ಇವರು,

ಪಂಚಾಯಿತಿಯವರು ಚಾಸಾ-1 ಇವರಿಗೆ ಕಸ ಹಾಕಲು ಗುರುತಿಸಿಕೊಟ್ಟ ಜಾಗೆಗೆ ತೆಗೆದುಕೊಂಡು ಹೋಗುವುದಾಗಿ ಹೇಳಿದ್ದರು ಎಂದರೆ, ನಾನು ಕೇಳಿಲ್ಲ. ಆಗ ಆರೋಪಿ ನಮಗೆ ಹೊಡೆಯಲು ಬಂದಾಗ, ಚಾಸಾ-1 ಕಾರ್ಮಿಕರ ಮೈ ಮುಟ್ಟಬೇಡಿ ಎಂದು ಹೇಳಿದ್ದರು ಎಂದರೆ ಗೊತ್ತಿಲ್ಲ. ಆಗ ಆರೋಪಿ ಚಾಸಾ-1 ಇವರಿಗೆ '' ಸೂಳೇ , ರಂಡೇ, ಕೀಳು ಜಾತಿಯವಳು ಎಂದು ಬೈಯುತ್ತಾ, ಎಡಕೆನ್ನೆಗೆ ಹೊಡೆದಿದ್ದನು'' ಎಂದರೆ, ನಾನು ನೋಡಿಲ್ಲ. ಆರೋಪಿ, ಚಾಸಾ-1 ಇವರ ಕೈಯಲ್ಲಿ ಇದ್ದ ಮೊಬೈಲ್ ನ್ನು ಕಿತ್ತು, ಕಾಂಕ್ರೀಟ್ ರಸ್ತೆಯ ಮೇಲೆ ಎಸೆದಿದ್ದರಿಂದ ಮೊಬೈಲ್ ಹಾಳಾಗಿತ್ತು ಎಂದರೆ, ನಾನು ಅದನ್ನು ನೋಡಿಲ್ಲ. ಆಗ ಆರೋಪಿ, ಚಾಸಾ-1 ಇವರಿಗೆ ಇನ್ನೊಮ್ಮೆ ಆ ಕಡೆಗೆ ಬಂದರೆ, ಕಾಲು ಕಡಿಯುವುದಾಗಿ ಬೆದರಿಕೆ ಹಾಕಿದ್ದ ಎಂದರೆ, ನನಗೆ ಗೊತ್ತಿಲ್ಲ.

3) ಆ ಸಮಯದಲ್ಲಿ ಚಾಸಾ-6 ಅಲ್ಲಿಗೆ ಬಂದಾಗ ಆರೋಪಿ ಅಲ್ಲಿಂದ ಸ್ಕೂಟಿಯಲ್ಲಿ ಹೋಗಿದ್ದ ಎಂದರೆ, ಸಾಕ್ಷಿ ಸುಮ್ಮನಿದ್ದಾರೆ. ಆ ಜಾಗೆಗೆ ಪಂಚಾಯಿತಿಯ ಅಧ್ಯಕ್ಷರು ಸಹ ಬಂದು, ಚಾಸಾ-1 ಇವರನ್ನು ವಿಚಾರಿಸಿದ್ದರು ಎಂದರೆ, ಸಾಕ್ಷಿ ಸುಮ್ಮನಿದ್ದಾರೆ. ನಂತರ ಚಾಸಾ-1 ರವರು ಇಳಿಸಿದ್ದ 10 ಮೂಟೆಗಳನ್ನು ಪುನಃ ಲೋಡ್ ಮಾಡಲು ಹೇಳಿದ್ದರು ಎಂದರೆ ನಿಜ. ಅದರಂತೆ ಅವುಗಳನ್ನು ನಾವು ತಂದಿದ್ದೆವು.ಆರೋಪಿ ಚಾಸಾ-1 ಮತ್ತು ನಮಗೆ ಬೈದು, ಚಾಸಾ-1 ಇವರಿಗೆ ಹಲ್ಲೆ ಮಾಡಿದ ವಿಷಯ ನನಗೆ ಗೊತ್ತು ಎಂದರೆ ಸರಿಯಲ್ಲ. ನಂತರ ಪೊಲೀಸರು ನನ್ನನ್ನು ದಿಃ 28-02-2022 ರಂದು ವಿಚಾರಿಸಿದಾಗ, ಈಗ ಓದಿದ ಹೇಳಿಕೆಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು **ನಿಶಾನೆ ಪಿ-11** ಎಂದು ಗುರುತಿಸಿದೆ.

4) ಚಾಸಾ-1 ಯಾವ ಜಾತಿಗೆ ಸೇರಿದವರು ಎಂದು ನನಗೆ ಗೊತ್ತಿಲ್ಲ. ಆರೋಪಿ ಯಾವ ಜಾತಿಯವನು ಎಂದು ನನಗೆ ಗೊತ್ತಿಲ್ಲ. ಈದಿನ ನಾನು ಅರೋಪಿಗೆ ಹೆದರಿ ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರವಾಗಿಃ ಶ್ರೀ ಟಿ.ವಿ.ಕೆ.ಎಸ್. ವಕೀಲರಿಂದ ಇಲ್ಲ ಎಂದು ಸಲ್ಲಿಸಿದ್ದಾರೆ**

-ಮರುವಿಚಾರಣೆ ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್.ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರು,
ಉಡುಪಿ.